### 3. 9 ನಿಮಿಷ ದೀಪ ಹಚ್ಚಿ: ಮೋದಿ ಕರೆ

ಕೊರೊನಾ ವೈರಾಣು ಹರಡುವುದನ್ನು ತಡೆಯುವ ಉದ್ದೇಶದಿಂದ ಹೇರಲಾದ ಲಾಕ್‌ಡೌನ್ 9ನೇ ದಿನ ಪೂರ್ಣಗೊಳಿಸಲಿದೆ. ಅಂದು, ರಾತ್ರಿ ಒಂಭತ್ತು ಗಂಟೆಗೆ ಜನರು ದೀಪ, ಮೊಂಬತ್ತಿ, ಟಾರ್ಚ್ ಅಥವಾ ಮೊಬೈಲ್ ಫೋನ್‌ನ ಫ್ಲ್ಯಾಷ್ ಲೈಟ್‌ಗಳನ್ನು ಒಂಭತ್ತು ನಿಮಿಷ ಬೆಳಗಿಸಬೇಕು. ಆ ಹೊತ್ತಿನಲ್ಲಿ ಮನೆಯ ವಿದ್ಯುತ್ ದೀಪಗಳನ್ನು ಆರಿಸಿ, ಕೊರೊನಾ ವೈರಾಣುವನ್ನು ಸೋಲಿಸುವ ನಮ್ಮ 'ಸಾಮೂಹಿಕ ದೃಢ ನಿಶ್ಚಯ'ವನ್ನು ತೋರಿಸುವುದಕ್ಕಾಗಿ ಇದನ್ನು ಮಾಡಬೇಕು. ಲಾಕ್‌ಡೌನ್ ಕಾರಣದಿಂದ ಮನೆಯಲ್ಲಿ ಇರುವ ಜನರಲ್ಲಿ ಏಕಾಂಗಿಯಾಗಿದ್ದೇವೆ ಎಂಬ ಭಾವನೆ ಬರಬಹುದು. ಆದರೆ, ಇಡೀ ದೇಶದ 130 ಕೋಟಿ ಜನರ ಸಾಮೂಹಿಕ ಶಕ್ತಿ ತಮ್ಮಲ್ಲಿ ಇದೆ ಎಂಬುದನ್ನು ಮರೆಯಬಾರದು. ಎಲ್ಲೆಡೆ ಜನರು ದೀಪ, ಮೊಂಬತ್ತಿ ಅಥವಾ ತಮ್ಮ ಮೊಬೈಲ್ ಫೋನ್‌ನ ಫ್ಲ್ಯಾಷ್ ಲೈಟ್ ಬೆಳಗಿಸಿದಾಗ ಅದು ಬೆಳಕಿನ ಮಹಾಶಕ್ತಿಯಾಗಿ ಪರಿವರ್ತನೆಯಾಗುತ್ತದೆ ಮತ್ತು ನಮ್ಮ ಹೋರಾಟದ ಸಾಮೂಹಿಕ ದೃಢ ನಿಶ್ಚಯವನ್ನು ತೋರುತ್ತದೆ. ಈ ಬೆಳಕಿನಲ್ಲಿ ನಾವು ಏಕಾಂಗಿಯಲ್ಲ, ಯಾರೂ ಏಕಾಂಗಿಯಲ್ಲ ಎಂಬ ದೃಢ ನಿಶ್ಚಯವನ್ನೂ ಕೈಗೊಳ್ಳಬೇಕು ಹಾಗೂ ಲಾಕ್‌ಡೌನ್‌ನಿಂದಾಗಿ ಭಾರಿ ಸಂಖ್ಯೆಯ ಬಡಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರೆಲ್ಲರನ್ನೂ ನಿಮ್ಮ ಮನಸ್ಸಿನಲ್ಲಿ ಇರಿಸಿಕೊಳ್ಳಿ. ಕೊರೊನಾ ವೈರಾಣು ಹರಡಿರುವ ಕತ್ತಲಿನಿಂದ ಅವರೆಲ್ಲರೂ ಬೆಳಕು ಮತ್ತು ಆಶಾವಾದದತ್ತ ನಡೆಯಲು ಸಹಕರಿಸಿ ಎಂದು ಮೋದಿ ಅವರು ದೇಶದ ಜನರನ್ನು ಕೋರಿದರು.

ಆಧಾರ:ಪ್ರಜಾವಾಣಿ, ದಿನಾಂಕ:04.04.2020